ಪರೀಕ್ಷಾ ತುರ್ತು

ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ. ಮಲ್ಲೇಶ್ವರಂ. ಬೆಂಗಳೂರು

*****************************************************************************************

**ಸಂಖ್ಯೆ : ಸಿ2/ಗಣಕಶಾಖೆ/ಮೌ.ಮಾ.ಆ/01/2020–21** **ದಿನಾಂಕ: 04.07.2020**

**:: ಸುತ್ತೋಲೆ ::**

**ವಿಷಯ** : ಜೂನ್/ಜುಲೈ 2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಮೌಲ್ಯಮಾಪನ ಕಾರ್ಯದ ಉಪಮುಖ್ಯ ಮೌಲ್ಯಮಾಪಕರು ಹಾಗೂ ಸಹಾಯಕ ಮೌಲ್ಯಮಾಪಕರ ಪರಿಷ್ಕೃತ ಆದೇಶಗಳನ್ನು ಶಾಲಾ ಲಾಗಿನ್ ಮತ್ತು ಬಿ.ಇ.ಒ ಲಾಗಿನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ : 1. ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ 18.06.2020

2. ಮೌಲ್ಯಮಾಪಕರ ಪ್ರಮಾಣೀತ ಕಾರ್ಯಾಚರಣಾ ವಿಧಾನ ಪತ್ರ ಸಂಖ್ಯೆ ಸಿ1/ಎಸ್.ಎಸ್.ಎಲ್.ಸಿ/2020/ಮೌ.ಮಾ/ಎಸ್.ಒ.ಪಿ/11/2020-21 ದಿನಾಂಕ 02.07.2020

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜೂನ್/ಜುಲೈ 2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಮೌಲ್ಯಮಾಪನ ಕಾರ್ಯವು ದಿನಾಂಕ 13.07.2020ರಿಂದ ಪ್ರಾರಂಭವಾಗುತ್ತಿದ್ದು, ಈ ಸಂಬಂಧ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರು, ತಮ್ಮ ಶಾಲೆಯಿಂದ ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜನೆಗೊಂಡಿರುವ ಉಪಮುಖ್ಯ ಮೌಲ್ಯಮಾಪಕರು ಮತ್ತು ಸಹಾಯಕ ಮೌಲ್ಯಮಾಪಕರ ನೇಮಕಾತಿ ಆದೇಶ ಪತ್ರಗಳನ್ನು ದಿನಾಂಕ 29.06.2020 ರಿಂದ ಆನ್‌ಲೈನ್‌ನಲ್ಲಿ ಮಂಡಳಿಯ ಜಾಲತಾಣದಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ವ್ಯವಸ್ಥೆ ಉಲ್ಲೇಖಿತ ಪತ್ರ – 01 ರಂತೆ ಕಲ್ಪಿಸಲಾಗಿತ್ತು. **ಕೋವಿಡ್ ಹಿನ್ನಲೆಯಲ್ಲಿ ಮೌಲ್ಯಮಾಪನ ಕೇಂದ್ರಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಉಲ್ಲೇಖ– 02ರ ಎಸ್‌ಓಪಿ ಅನ್ವಯ ಮೌಲ್ಯಮಾಪನ ಆದೇಶಗಳಲ್ಲಿ ಪರಿಷ್ಕರಿಸಿ, ಪರಿಷ್ಕೃತ ನೇಮಕಾತಿ ಆದೇಶಗಳನ್ನು ದಿನಾಂಕ 06.07.2020ರಂದು ಮರು ಅಪ್‌ಲೋಡ್ ಮಾಡಲಾಗುವುದು.**

1. ಮೌಲ್ಯಮಾಪನ ಆದೇಶಗಳನ್ನು ನೀಡಿರುವ ಮೌಲ್ಯಮಾಪಕರುಗಳಲ್ಲಿ 55 ವರ್ಷ ವಯೋಮಾನ ಮೀರಿರುವ ಶಿಕ್ಷಕರುಗಳಿಗೆ ಮೌಲ್ಯಮಾಪನ ಕಾರ್ಯದಿಂದ ವಿನಾಯಿತಿ ನೀಡಿದೆ. ಆದಾಗ್ಯೂ 55 ವರ್ಷ ಮೀರಿದ ಮೌಲ್ಯಮಾಪಕರುಗಳು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ಆಪೇಕ್ಷಿಸಿದಲ್ಲಿ ಅವಕಾಶ ನೀಡಲಾಗುವುದು.

2. ಅಂತರ್‌ಜಿಲ್ಲಾ ಪ್ರಯಾಣವನ್ನು ಕನಿಷ್ಟಗೊಳಿಸುವ ನಿಟ್ಟಿನಲ್ಲಿ ಶಿಕ್ಷಕರುಗಳಿಗೆ ಅನುಕೂಲವಾಗುವಂತೆ ಅನುಬಂಧ– 01 ರಲ್ಲಿ ಲಗತ್ತಿಸಿರುವ ಆಯ್ದ 10 ವಿಷಯಗಳ ಮೌಲ್ಯಮಾಪನ ಕಾರ್ಯವನ್ನು ವಿಕೇಂದ್ರಿಕರಿಸಿ ಆಯ್ದ ಕೆಲವು ಜಿಲ್ಲೆಗಳಲ್ಲಿ ಹೊಸ ಮೌಲ್ಯಮಾಪನ ಕೇಂದ್ರಗಳನ್ನು ತೆರೆಯಲಾಗಿದೆ.

3. ಮೌಲ್ಯಮಾಪನ ಪ್ರಕ್ರಿಯೆಯನ್ನು ವಿಕೇಂದ್ರಿಕರಿಸಿ ಜಿಲ್ಲಾಮಟ್ಟದಲ್ಲಿ ಮೌಲ್ಯಮಾಪನವನ್ನು ಮರು ಯೋಜಿಸಿರುವುದರಿಂದ ಜಿಲ್ಲೆಗಳಲ್ಲಿನ ಕೆಲವು ವಿಷಯಗಳ ಮೌಲ್ಯಮಾಪಕರುಗಳನ್ನು ಈ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

4. ಆಯಾ ಶಾಲೆಯ ಮುಖ್ಯ ಶಿಕ್ಷಕರು ತಮ್ಮ ಶಾಲೆಯಿಂದ ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜಿಸಿರುವ ಅರ್ಹ **ಶಿಕ್ಷಕರ ಪರಿಷ್ಕೃತ ನೇಮಕಾತಿ ಆದೇಶ ಪತ್ರ**ಗಳನ್ನು ಪರಿಶೀಲಿಸಿ, ಸಂಬಂಧಿಸಿದ ಶಿಕ್ಷಕರಿಗೆ ವಿತರಣೆ ಮಾಡಿ ಕರ್ತವ್ಯದಿಂದ ಬಿಡುಗಡೆಗೊಳಿಸುವುದು.

ಪ್ರತಿ ಜಿಲ್ಲೆ ಮತ್ತು ಬ್ಲಾಕ್/ತಾಲ್ಲೂಕಿನಲ್ಲಿ ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜನೆಗೊಂಡಿರುವ ಶಿಕ್ಷಕರ ಮೌಲ್ಯಮಾಪಕರ ಈ ಪರಿಷ್ಕೃತ ಆದೇಶ ಪತ್ರಗಳನ್ನು ಸಂಬಂಧಿಸಿದ ಬ್ಲಾಕ್/ತಾಲ್ಲೂಕಿನ BEO LOGIN ನಲ್ಲಿಯೂ ಸಹ ನೀಡಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ ವಿತರಿಸಿ ಕಡ್ಡಾಯವಾಗಿ ಎಲ್ಲಾ ಅರ್ಹ ಶಿಕ್ಷಕರು ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಲು ನಿರ್ದೇಶಿಸುವುದು.

ಮುಂದುವರೆದಂತೆ ಜಿಲ್ಲೆಯ EO LOGIN ನಲ್ಲಿಯೂ ಸಹ ಆಯಾ ಜಿಲ್ಲೆಯ ವಿವಿಧ ವಿಷಯಗಳ ಮೌಲ್ಯಮಾಪನ ಕೇಂದ್ರಗಳಿಗೆ ನೇಮಕ ಮಾಡಿರುವ ಮೌಲ್ಯಮಾಪಕರ ಚೆಕ್‌ಲಿಸ್ಟ್ ನೀಡಿದ್ದು, ಅದರಂತೆ ಆಯಾ ಜಿಲ್ಲೆಯ ಉಪನಿರ್ದೇಶಕರು ಮತ್ತು ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು ಮೌಲ್ಯಮಾಪನ ಕಾರ್ಯದ ಉಸ್ತುವಾರಿ ನಿರ್ವಹಿಸುವುದು.

(ಸುಮಂಗಲ.ವಿ) 4/2
ನಿರ್ದೇಶಕರು (ಪರೀಕ್ಷೆಗಳು)

ಅಗತ್ಯ ಕ್ರಮಕ್ಕಾಗಿ ::

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ
2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗು ಮಾನ್ಯತೆ ಪಡೆದಿರುವ ಖಾಸಗಿ ಅನುದಾನರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ- ಶಾಲಾ ಲಾಗಿನ್ ಮೂಲಕ

| ಅನುಬಂಧ – 01 | | |
|---|---|---|
| JUNE/JULY-2020 SSLC EXAMINATION (MINOR SUBJECTS GROUPS) | | |
| SL.No | SUBJECT CODE | SUBJECT NAME |
| 1 | 12U | First Lang - Urdu |
| 2 | 14E | First Lang - English |
| 3 | 16S | First Lang - Sanskrit |
| 4 | 33K | Second Lang - Kannada |
| 5 | 62K | Third Lang - Kannada |
| 6 | 63E | Third Lang - English |
| 7 | 67S | Third Lang - Sanskrit |
| 8 | 81U | Mathematics(Urdu) |
| 9 | 83U | Science(Urdu) |
| 10 | 85U | Social Science(Urdu) |